# <u>ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.</u>

ಸಿ.ಸಿ. ನಂ.68/2023

ಪಿ.ಡಬ್ಯೂಃ1

ಸಿಡಬ್ಲ್ಯೂ-1

ಸಾಕ್ಷಿದಾರರ ಹೆಸರು : ಅರುಣ ನಡಕಟ್ಟಿನ

ತಂದೆಯ ಹೆಸರು : ಜೊಸೆಪ್ ನಡಕಟ್ಟಿನ

ವಯಸ್ಸು : 31 ವರ್ಷ

ಉದ್ಯೋಗ : ಉಪ ವಲಯ ಅರಣ್ಯಾಧಿಕಾರಿ ವ ಮೋಜನಿದಾರ,

ವಾಸ : ಸುಂಕಸಾಳ

ದಿನಾಂಕಃ 29-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**<u>ಮುಖ್ಯ ವಿಚಾರಣೆಃ</u> ಸರಕಾರದ ಪರವಾಗಿ ಸ.ಸ. ಆ ರವರಿಂದ ಃ**

1. ನಾನು ದಿನಾಂಕಃ 16-04-2021 ರಿಂದ ಇಲ್ಲಿ ತನಕ ಮಾಸ್ತಿಕಟ್ಟಾ ವಲಯಯದ ಹೆಬ್ಬುಳ ಶಾಖೆಯಲ್ಲಿ ಉಪ ವಲಯ ಅರಣ್ಯಾಧಿಕಾರಿ ವ ಮೋಜನಿದಾರನಾಗಿ ಕಾರ್ಯ ನಿರ್ವಹಿಸುತ್ತಾ ಇದ್ದೇನೆ .

2. ನಾನು ವನ್ಯಜೀವಿ ಸಂರಕ್ಷಣಾ ಕಾಯ್ದೆ ಪ್ರಕಾರ ದೂರು ನೀಡಲು ಅಧಿಕಾರ ಹೊಂದಿರುತ್ತೇನೆ. ದಿಃ 23-08-2022 ರಂದು ಬೆಳಗಿನ ಹೊತ್ತಿಗೆ ನಾನು ಕರ್ತವ್ಯದಲ್ಲಿದ್ದಾಗ ಆರೋಪಿ ನಂ. 1 ರವರ ಮನೆಯಲ್ಲಿ ಶಿಕಾರಿ ಮಾಡಿ ಕಾಡುಪ್ರಾಣಿಯ ಮಾಂಸವನ್ನು ಮನೆಯಲ್ಲಿ ಇಟ್ಟಿದ್ದಾರೆ ಎಂದು ಬಾತ್ಮಿ ಬಂದಿರುತ್ತದೆ. ಆ ಬಾತ್ಮಿ ವಿಚಾರವನ್ನು ನನ್ನ ಮೇಲಾಧಿಕಾರಿಗಳಾದ ಚಾಸಾ -6 ಮತ್ತು 7 ರವರಿಗೆ ತಿಳಿಸಿರುತ್ತೇನೆ. ಚಾಸಾ -7 ರವರಿಂದ ಶೋಧನಾ ಸಮುಚಿತ ವರದಿಯನ್ನು ಚಾಸಾ -6 ರವರ ಮೂಲಕ ಪಡೆದಿರುತ್ತೇನೆ. ನಂತರ ನಾನು ನನ್ನ ಅಧೀನ ಸಿಬ್ಬಂದಿಗಳಾದ ಚಾಸಾ -2 ಮತ್ತು ನಾಗಪ್ಪಾ ಗಿರಿಯಾ ನಾಯ್ಕು ರವರ ಜೊತೆಗೆ ಪಂಚರಾದ ಚಾಸಾ -3 ಮತ್ತು 4 ರವರ ಮನೆಗೆ ಹೋಗಿರುತ್ತೇನೆ. ಚಾಸಾ-3 ಮತ್ತು 4 ರವರಿಗೆ ಮೇಲ್ಕಂಡ ಬಾತ್ಮಿಯನ್ನು ತಿಳಿಸಿ ಪಂಚರಾಗಿ ಸಹಕರಿಸಲು ಕೋರಿರುತ್ತೇನೆ. ಸದ್ರಿ ಪಂಚರು ಪಂಚರಾಗಲು ಒಪ್ಪಿದಾಗ, 1 ನೇ ಆರೋಪಿಯ ಮನೆಯ ಹತ್ತಿರ ನಾನು ನಾಗೂ ಮೇಲ್ಕಂಡ ಹಾಗೂ ಪಂಚರು ಹೋಗಿರುತ್ತೇವೆ.

**3**. ಆ ಮನೆಯಲ್ಲಿದ್ದ 1 ನೇ ಆರೋಪಿಯನ್ನು ಹೊರಗಡೆ ಕರೆದು, ಶೋಧನಾ ಸಮುಚಿತ ವರದಿಯನ್ನು ಅವರಿಗೆ ತೋರಿಸಿರುತ್ತೇನೆ. ಅಲ್ಲದೇ ಅವರ ಮನೆಯಲ್ಲಿ ಕಾಡು ಪ್ರಾಣಿ ಮಾಂಸವನ್ನು ಶೇಖರಿಸಿರುವುದರ ಬಗ್ಗೆ ಬಾತ್ಮಿ ಬಂದಿದ್ದು , ಮನೆಯನ್ನು ಶೋಧಿಸಲು ಇದೆ ಎಂದು ಹೇಳಿದೆ. 1 ನೇ ಆರೋಪಿ ಶೋಧಿಸಲು ಒಪ್ಪಿ ಮನೆಯ ಒಳಗಡೆ ಕರೆದುಕೊಂಡು ಹೋದರು. ಆ ಮನೆಯ ಅವರ ಮಲಗುವ ಕೋಣೆಯನ್ನು ಶೋಧಿಸಿದಾಗ, ಮಂಚದ ಕೆಳಗಡೆ ಬೇಯಿಸಿದ ಕಾಡು ಪ್ರಾಣಿಯ ಮಾಂಸವನ್ನು ಒಂದು ಸ್ಟೀಲ್ ಪಾತ್ರೆಯಲ್ಲಿ ಮುಚ್ಚಲ ಹಾಕಿ ಇಟ್ಟಿರುವುದು ಕಂಡು ಬಂದಿತ್ತು. ಮಂಚದ ಪಕ್ಕ ಒಂದು ಬಟ್ಟೆಯಿಂದ ಸುತ್ತಿಟ್ಟಿದ್ದ ಒಂದು ಬಂದೂಕು ಕಂಡು ಬಂದಿತ್ತು. ಆಗ ಸದ್ರಿ 1 ನೇ ಆರೋಪಿಯನ್ನು ಆ ಬಂದೂಕು ಮತ್ತು ಪರವಾನಿಗೆಯ ಬಗ್ಗೆ ವಿಚಾರಿಸಿದಾಗ, 1 ನೇ ಆರೋಪಿ ಪರವಾನಿಗೆ ಬಗ್ಗೆ ಮಾಹಿತಿ ಇರುವುದಿಲ್ಲ ಹಾಗೂ 2 ನೇ ಆರೋಪಿ ನಿನ್ನೆ ಯ ದಿವಸ ಈ ಮನೆಯಲ್ಲಿ ತಂದು ಇಟ್ಟಿದ್ದರು ಎಂದು ತಿಳಿಸಿದರು.

**4**. ಸದ್ರಿ ಬೇಯಿಸಿಟ್ಟ ಕಾಡು ಪ್ರಾಣಿ ಮಾಂಸದ ಬಗ್ಗೆ ವಿಚಾರಿಸಿದಾಗ, 1 ನೇ ಆರೋಪಿ ನಿನ್ನೆ ದಿವಸ ರಾತ್ರಿ ಅಂದಾಜು 9–30 ಗಂಟೆಗೆ ತಾನು 2 ನೇ ಆರೋಪಿ ಯ ಜೊತೆ ಹೋಗಿ ತನ್ನ ಮನೆಯಿಂದ ಅಂದಾಜು 1 ರಿಂದ 1 ವರೆ ಕಿ.ಮೀ ದೂರದಲ್ಲಿ ರಾಷ್ಟ್ರೀಯ ಹೆದ್ದಾರಿ 63 ರ ಪಕ್ಕ ದಿಂದ ಅಂದಾಜು 150 ಮೀಟರ್ ಒಳಗಡೆ ಮೆಣಸಿನಗದ್ದೆಯಲ್ಲಿ ಹೆಡ್ ಟಾರ್ಚ್ ಮೂಲಕ ಒಂದು ಜಿಂಕೆಯನ್ನು ಗುಂಡಿಟ್ಟು ಕೊಂದಿರುವುದಾಗಿ ತಿಳಿಸಿದರು. ಅಲ್ಲದೇ 2 ನೇ ಆರೋಪಿ ಕೂಡ ಆ ಜಿಂಕೆಯ ಮೇಲೆ ಒಂದು ಗುಂಡು ಹಾರಿಸಿರುತ್ತಾರೆ ಹಾಗೂ ಅವರಿಬ್ಬರು ಜಿಂಕೆ ಬಿದ್ದ ಸ್ಥಳಕ್ಕೆ ಹೋಗಿ ನೋಡಿದಾಗ ಜಿಂಕೆ ಸತ್ತಿರುವುದು ಕಂಡು ಬಂದಿತು ಎಂದು 1 ನೇ ಆರೋಪಿ ತಿಳಿಸಿದರು. ನಾವಿಬ್ಬರು ನಂತರ ಆ ಸತ್ತು ಬಿದ್ದ ಜಿಂಕೆಯನ್ನು ಅಲ್ಲಿಂದ ಅಂದಾಜು 300 ಮೀಟರ್ ದೂರದಲ್ಲಿರುವ ಅರುಮತ್ತಿ ಹಳ್ಳಕ್ಕೆ ತೆಗೆದುಕೊಂಡು ಹೋಗಿರುವುದಾಗಿ ತಿಳಿಸಿದರು. ಮೊದಲೆ ತೆಗೆದುಕೊಂಡು ಹೋಗಿದ್ದ ಚಾಕು ಮತ್ತು ಕತ್ತಿ ಬಳಸಿ ಸತ್ತ ಜಿಂಕೆಯಿಂದ ಮಾಂಸವನ್ನು ಬೇರ್ಪಡಿಸಿ, ಉಳಿದ ತ್ಯಾಜ್ಯವನ್ನು ಅಲ್ಲಿಯೇ ಬಿದ್ದಿದ್ದ ಒಂದು ಚೀಲದಲ್ಲಿ ಹಾಕಿ ತಮ್ಮ ಮನೆಗೆ ಮಾಂಸವನ್ನು ಪಾಲು ಮಾಡಿಕೊಂಡು ತೆಗೆದುಕೊಂಡು ಹೋಗಿರುವುದಾಗಿ ತಿಳಿಸಿದರು.

5. ಸದ್ರಿ ಕೃತ್ಯಕ್ಕೆ ಬಳಸಿದ ವಸ್ತುಗಳನ್ನು ಕೊಡಲು ನಾನು ತಿಳಿಸಿದಾಗ, 1 ನೇ ಆರೋಪಿ ಕತ್ತಿ ಮತ್ತು ಹೆಡ್ ಟಾರ್ಚ್ ನ್ನು ತಂದು ಕೊಟ್ಟರು. ಆಗ ಕೃತ್ಯಕ್ಕೆ ಬಳಸಿದ ಚಾಕು ಎಲ್ಲಿ ಎಂದು ಕೇಳಿದಾಗ, ಅದನ್ನು 2 ನೇ ಆರೋಪಿ ತೆಗೆದುಕೊಂಡು ಹೋಗಿದ್ದಾರೆ ಎಂದು ತಿಳಿಸಿದರು. ನಂತರ 1 ನೇ ಆರೋಪಿಗೆ ಬೇಟೆಯಾಡಿದ ಸ್ಥಳವನ್ನು ತೋರಿಸಲು ಹೇಳಿದಾಗ, 1 ನೇ ಆರೋಪಿ ಒಪ್ಪಿರುತ್ತಾರೆ. ಕೃತ್ಯಕ್ಕೆ ಬಳಸಿದ ವಸ್ತುಗಳನ್ನು, ನಾನು ಪಂಚನಾಮೆ ಜರುಗಿಸಿ, ಜಪ್ತು ಮಾಡಿರುತ್ತೇನೆ. ಸ್ಥಳದಲ್ಲಿ ನಾಗಪ್ಪಾ ಗಿರಿಯಾ ನಾಯ್ಕ ರವರು ಫೋಟೊಗಳನ್ನು ತೆಗೆದಿರುತ್ತಾರೆ. ಅಲ್ಲಿಂದ 1 ನೇ ಆರೋಪಿ ನಮ್ಮನ್ನು ಅಂದಾಜು ಒಂದೂವರೆ ಕಿ.ಮೀ ದೂರದ ರಾಷ್ಟ್ರೀಯ ಹೆದ್ದಾರಿ ಪಕ್ಕ ಕರೆದುಕೊಂಡು ಹೋದರು. ಆ ಸ್ಥಳದಿಂದ ಅಂದಾಜು 150 ಮೀಟರ್ ದೂರದ ಮೆಣಸಿನಗದ್ದೆಗೆ ಕರೆದುಕೊಂಡು ಹೋಗಿ, ಅವರು ಬೇಟೆಯಾಡಲು ನಿಂತ ಸ್ಥಳ ಹಾಗೂ ಜಿಂಕೆ ಸತ್ತು ಬಿದ್ದ ಸ್ಥಳವನ್ನು ತೋರಿಸಿದರು.

6. ಆಗ ನಾನು 1 ನೇ ಆರೋಪಿ ಗೆ ಜಿಂಕೆ ಯ ಮಾಂಸ ಬೇರ್ಪಡಿಸಿದ ಸ್ಥಳ ತೋರಿಸಲು ಹೇಳಿದಾಗ, ನಮ್ಮನ್ನು ಅಲ್ಲಿಂದ ಅಂದಾಜು 300 ಮೀಟರ್ ದೂರದಲ್ಲಿರುವ ಆರುಮತಿ ಹಳ್ಳಕ್ಕೆ ಕರೆದುಕೊಂಡು ಹೋದರು. ನಾನು ಅಲ್ಲಿ ಜಿಂಕೆಯ ಉಳಿದ ಭಾಗಗಳನ್ನು ತೋರಿಸಲು ಹೇಳಿದಾಗ, ಅಲ್ಲೆ ಒಂದು ಚೀಲ ಬಿದ್ದಿರುವುದನ್ನು ತೋರಿಸಿದರು. ಅದನ್ನು ತೆಗೆಸಿ ನೋಡಿದಾಗ, ಅದರಲ್ಲಿ ಜಿಂಕೆಯ ಚರ್ಮ ಹಾಗೂ 4 ಕಾಲುಗಳು ಇರುವುದು ಕಂಡು ಬಂದಿತ್ತು. ನಂತರ ಜಂಕೆಯ ತಲೆ ಬರುಡೆ ಹಾಗೂ ಹೊಟ್ಟೆಯ ಭಾಗ ಎಲ್ಲಿದೆ ಎಂದು ಕೇಳಿದಾಗ , 1 ನೇ ಆರೋಪಿಯು ಅಲ್ಲೆ ಪಕ್ಕದಲ್ಲಿ ಬಿದ್ದಿದ್ದ ಹೊಟ್ಟೆಯ ಭಾಗ ಹಾಗೂ ಕರುಳನ್ನು ತೋರಿಸಿದರು. ತಲೆ ಬುರುಡೆಯ ಬಗ್ಗೆ ಅವರಿಗೆ ವಿಚಾರಿಸಿದಾಗ , ಹಳ್ಳದ ಹರಿಯುವ ನೀರಿನಲ್ಲಿ ತೇಲಿ ಹೋಗಿರಬಹುದು ಎಂದು ತಿಳಿಸಿದರು. ನಾನು ಸಿಬ್ಬಂದಿಗಳ ಜೊತೆ ಹಳ್ಳದಲ್ಲಿ ಪರಿಶೀಲಿಸಿದಾಗ, ಜಿಂಕೆಯ ತಲೆ ಬುರುಡೆ ಎಲ್ಲಿಯೂ ಕಂಡು ಬಂದಿಲ್ಲ.

7. 1 ನೇ ಆರೋಪಿಗೆ ನಾನು ವನ್ಯ ಜೀವಿ ಸಂರಕ್ಷಣಾ ಕಾಯ್ದೆ ಉಲ್ಲಂಘಿಸಿರುವುದನ್ನು ತಿಳಿಸಿ , ದಸ್ತಗಿರಿ ಮಾಡಿರುತ್ತೇನೆ. ಮೇಲೆ ಹೇಳಿದಂತಹ ಹೊಟ್ಟೆಯ ಭಾಗ , ಚರ್ಮ , ಕಾಲುಗಳು ಹಾಗೂ ಕರುಳನ್ನು ಪಂಚನಾಮೆ ಮೂಲಕ ಜಪ್ತು ಪಡಿಸಿ , ಫೊಟೊಗಳನ್ನು ತೆಗೆಸಿರುತ್ತೇನೆ. ನಂತರ ವಲಯ ಕಚೇರಿಗೆ ಫೋನ್

ಕರೆ ಮಾಡಿ , ಅರಣ್ಯ ಮೊಕದ್ದಮೆ ಸಂಖ್ಯೆ 9/2022-23 ರಂತೆ ದಿಃ 23-08-2022 ಎಂದು ಗುನ್ಹೆ ದಾಖಲಿಸಿರುತ್ತೇನೆ.

**8**. ನಂತರ 2 ನೇ ಆರೋಪಿಯ ಮನೆಗೆ ಶೋಧಿಸಲು ಹೋದಾಗ, 2 ನೇ ಆರೋಪಿ ನಾಪತ್ತೆ ಯಾಗಿರುವುದು ಕಂಡು ಬಂತು. 1 ನೇ ಆರೋಪಿಯನ್ನು ಮುಂದಿನ ವಿಚಾರಣೆಗಾಗಿ, ಜಪ್ತು ಪಡಿಸಿದ ಸ್ವತ್ತುಗಳ ಜೊತೆ ಕರೆದುಕೊಂಡು ವಲಯ ಕಚೇರಿಗೆ ಹೋಗಿರುತ್ತೇನೆ. ಅಲ್ಲಿ ಸ್ವತ್ತು ಸಮೇತ ಪೊಟೊಗಳನ್ನು ತೆಗೆಸಿರುತ್ತೇನೆ. ನಾನು ಸಲ್ಲೀಸಿದ ಪಿರ್ಯಾದಿಯನ್ನು ನೋಡುತ್ತಿದ್ದು , ಅದನ್ನು ನಿಪಿ- 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ-1 (ಎ)ಎಂದು ಗುರುತಿಸಲಾಯಿತು. ಮೇಲೆ ಹೇಳಿದಂತಹ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ನಿಪಿ- 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2 (ಎ)ಎಂದು ಗುರುತಿಸಲಾಯಿತು. 3 ಹಾಳೆಯಲ್ಲಿರುವ ಪೊಟೊ ಗಳನ್ನು ಹಾಗೂ ಅದರ ಬಗ್ಗೆ ಸಿಡಿಗಳನ್ನು ಹಾಜರು ಪಡಿಸಿದ್ದು , ಅವುಗಳನ್ನು ಪುರಾವೆಗೊಳಪಡಿಸುವ ಜವಾಬ್ದಾರಿ ಹಾಗೂ ಆರೋಪಿ ವಕೀಲರ ತಕರಾರಿಗೆ ಒಳಪಟ್ಟು ಕ್ರಮವಾಗಿ ನಿಪಿ- 3 ರಿಂದ 6 ಎಂದು ಗುರುತಿಸಲಾಯಿತು. ಹೆಡ್ ಟಾರ್ಚ್, ಕತ್ತಿ , ಬಂದೂಕು , ಸ್ಟೀಲ್ ಪಾತ್ರೆ , ಮುಚ್ಚಲ ನೋಡಿದರೆ ಗುರುತಿಸುತ್ತೇನೆ. ನಾಲ್ಕು ಕಾಲುಗಳು, ಚರ್ಮ, ಕರುಳು ಮತ್ತು ಹೊಟ್ಟೆ ಭಾಗವನ್ನು ನೋಡಿದರೆ ಗುರುತಿಸುತ್ತೇನೆ. ಆ ಬಗ್ಗೆ ಪೊಟೊಗಳನ್ನು ಹಾಜರು ಪಡಿಸಿದ್ದೇನೆ.

**9.** ಅದೇ ದಿನ ಪಶು ವೈದ್ಯರು, ಅಂಕೋಲಾ ರವರು ವಲಯ ಕಚೇರಿಗೆ ಬಂದು ನಾವು ಜಪ್ತು ಪಡಿಸಿದ ಮಾಂಸ ಮತ್ತು ಹಳ್ಳದಲ್ಲಿ ಸಿಕ್ಕಿದ ಜಿಂಕೆಯ ಚರ್ಮ ದ ಮಾದರಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದಿರುತ್ತಾರೆ. ನಂತರ 1 ನೇ ಆರೋಪಿಯನ್ನು ಸೂಕ್ತ ಬಂದೊಬಸ್ತ ನಲ್ಲಿ ಮಾನ್ಯ ನ್ಯಾಯಾಧೀಶರ ಗೃಹ ಕಚೇರಿಗೆ ಮುಂದಿನ ಕ್ರಮಕ್ಕಾಗಿ ಹಾಜರುಪಡಿಸಿದ್ದೇನೆ.

**10**. ದಿಃ 27-01-2023 ರಂದು ಚಾಸಾ -6 ಮತ್ತು 7, ನಾನು , ಸಿಬ್ಬಂದಿಗಳು, ಪಂಚರು ಹಾಗೂ ಆರೋಪಿ 1 ಮತ್ತು 2 ರವರು ಮೆಣಸಿನಗದ್ದೆಗೆ ಸ್ಥಳ ಪರಿಶೀಲನೆಗಾಗಿ ಬಂದಿರುತ್ತೇವೆ. ಚಾಸಾ-7 ರವರು ಬೇಟೆಯಾಡಿದ ಹಾಗೂ ಜಿಂಕೆ ಸತ್ತು ಬಿದ್ದ ಸ್ಥಳಗಳನ್ನು ತೋರಿಸಲು ಹೇಳಿದಾಗ , ಆ ಎರಡು ಸ್ಥಳಗಳನ್ನು ಆರೋಪಿ 1 ಮತ್ತು 2 ರವರು ತೋರಿಸಿದರು. ಆ ಸಮಯದಲ್ಲಿ ಪೊಟೊ ವನ್ನು ತೆಗೆಯಲಾಗಿತ್ತು. ಆ ಬಗ್ಗೆ

ಪಂಚನಾಮೆಯನ್ನು ಕೂಡ ಜರುಗಿಸಲಾಗಿದೆ. ಆ ಪಂಚನಾಮೆ ಯನ್ನು ನೋಡುತ್ತಿದ್ದು ಅದನ್ನು ನಿಪಿ–7 ಎಂದು, ಸಾಕ್ಷಿಯ ಸಹಿಯನ್ನು ನಿಪಿ–7 (ಎ) ಎಂದು ಗುರುತಿಸಲಾಯಿತು. 2 ಹಾಳೆಗಳಲ್ಲಿರುವ ಪೋಟೊಗಳನ್ನು ಹಾಜರುಪಡಿಸಿದ್ದು, ಪುರಾವೆಗೊಳಪಡಿಸುವ ಜವಾಬ್ದಾರಿ ಹಾಗೂ ಆರೋಪಿ ವಕೀಲರ ತಕರಾರಿಗೆ ಒಳಪಟ್ಟು ಕ್ರಮವಾಗಿ ನಿಪಿ– 8 ಮತ್ತು 9 ಎಂದು ಗುರುತಿಸಲಾಯಿತು. ಬಂದೂಕಿನ ಬಗ್ಗೆ ಚಾಸಾ –7 ರವರು ಆರೋಪಿ 1 ಮತ್ತು 2 ರವರಿಗೆ ವಿಚಾರಿಸಿದಾಗ, 1 ನೇ ಆರೋಪಿ ಸದ್ರಿ ಬಂದೂಕು ಹೆಬ್ಬುಳ ಗ್ರಾಮದ 3 ನೇ ಆರೋಪಿಗೆ ಸೇರಿದ್ದು, 3 ನೇ ಆರೋಪಿಯ ಮನೆಯಲ್ಲಿ ಅಣ್ಣತಮ್ಮಂದಿರ ಮಧ್ಯೆ ಕೌಟುಂಬಿಕ ಕಲಹ ಇದ್ದ ಕಾರಣ ತನ್ನ ಮನೆಯಲ್ಲಿ ಬಂದೂಕು ತಂದು ಇಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಅದೇ ಬಂದೂಕಿನಿಂದ ತಾನು ಹಾಗೂ 2 ನೇ ಆರೋಪಿ ತಲಾ ಒಂದೊಂದು ಗುಂಡು ಹಾರಿಸಿ ಜಿಂಕೆ ಕೊಂದಿರುವುದಾಗಿ ತಿಳಿಸಿದರು.

11. ಮಾಂಸ ಬೇರ್ಪಡಿಸಿದ ಸ್ಥಳವನ್ನು ತೋರಿಸಲು ಚಾಸಾ –7 ರವರು ಅವರಿಬ್ಬರಿಗೆ ತಿಳಿಸಿದಾಗ, ಅಲ್ಲಿಂದ ಸುಮಾರು 300 ಮೀಟರ್ ದೂರದಲ್ಲಿರುವ ಆರುಮತ್ತಿ ಹಳ್ಳಕ್ಕೆ 1 ಮತ್ತು 2 ಆರೋಪಿಯವರು ನಮ್ಮನ್ನು ಕರೆದುಕೊಂಡು ಹೋದರು. ಅವರಿಬ್ಬರು ಅಲ್ಲಿ ಮಾಂಸ ಬೇರ್ಪಡಿಸಿದ ಸ್ಥಳವನ್ನು ತೋರಿಸಿದರು. ಅಲ್ಲಿ ಪಂಚನಾಮೆಯನ್ನು ಜರುಗಿಸಲಾಯಿತು. ನಂತರ 1 ನೇ ಆರೋಪಿಯ ಮನೆಯನ್ನು ಚಾಸಾ –7 ರವರು ತೋರಿಸಲು ಹೇಳಿದಾಗ, 1 ನೇ ಆರೋಪಿ ಒಪ್ಪಿ ಅಂದಾಜು 1 ರಿಂದ ಒಂದೂವರೆ ಕಿ.ಮೀ ದೂರ ಕರೆದುಕೊಂಡು ಹೋಗಿ ತನ್ನ ಮನೆಯನ್ನು ತೋರಿಸಿದರು. ಆ ಬಗ್ಗೆ ಪುರವಣಿ ಪಂಚನಾಮೆ ಯಲ್ಲಿ ನಮೂದು ಮಾಡಲಾಗಿದೆ. ಸದ್ರಿ ಪಂಚನಾಮೆಯನ್ನು ನೋಡುತ್ತಿದ್ದು , ಅದನ್ನು ಈಗಾಗಲೇ ನಿಪಿ–7 ಎಂದು ಗುರುತಿಸಲಾಗಿದೆ. 1 ನೇ ಆರೋಪಿಯನ್ನು ಈ ದಿನ ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತೇನೆ. 2 ನೇ ಆರೋಪಿ ಮೃತ ಪಟ್ಟಿರುತ್ತಾನೆ. 3 ನೇ ಆರೋಪಿಯನ್ನು ಈ ದಿನ ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತೇನೆ.

**ಮುಂದುವರೆದ ಮುಖ್ಯ ವಿಚಾರಣೆಯನ್ನು ಸರ್ಕಾರಿ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.